# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ನಸಿಂಹರಾಜ ಚೌಕ, ಬೆಂಗಳೂರು-560 002

ಸಂಖ್ಯೆ.ವಿ.ಆ(ಕಲ್ಯಾಣ/ಮಾರುಕಟ್ಟೆ)ಪಿಆರ್/654/20-21 ದಿನಾಂಕ: 30-07-2020

## ಕಛೇರಿ ಆದೇಶ

ವಿಷಯ: ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಮತ್ತು ಕಲಾಸಿಪಾಳ್ಯ ಮಾರುಕಟ್ಟೆಯನ್ನು ಸೀಲ್‌ಡೌನ್ ಅನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ:- 1. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ವಿ.ಆ(ಕಲ್ಯಾಣ/ಮಾರುಕಟ್ಟೆ) ಪಿಆರ್/ /311/20-2021 ದಿನಾಂಕ; 22-06-2020.

2. ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ವಿ.ಆ(ಕಲ್ಯಾಣ/ಮಾರುಕಟ್ಟೆ) ಪಿಆರ್/ /436/20-2021 ದಿನಾಂಕ; 06-07--2020.

3. ಕೇಂದ್ರ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 40-3/2020-ಡಿಎಂ-1(ಎ) ದಿನಾಂಕ: 29-07-2020ರ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರದಲ್ಲಿ ಕೋವಿಡ್-19 ಕೋರೋನಾ ಸೋಂಕು ವ್ಯಾಪಕವಾಗಿ ಹರಡುತ್ತಿದ್ದು, ಶ್ರೀ ಕೃಷ್ಣ ರಾಜೇಂದ್ರ ಮಾರುಕಟ್ಟೆ ಮತ್ತು ಕಲಾಸಿಪಾಳ್ಯ ಮಾರುಕಟ್ಟೆಯಲ್ಲಿ ಕೋರೋನಾ ಸೋಂಕು ಪ್ರಕರಣಗಳು ಉಲ್ಬಣವಾಗುತ್ತಿರುವುದರಿಂದ ಸೀಲ್‌ಡೌನ್ ಅವಧಿಯನ್ನು ದಿನಾಂಕ 31-07-2020 ರವರೆವಿಗೆ ಮುಂದುವರೆಸಲಾಗಿರುತ್ತದೆ.

ಮುಂದುವರೆದು, ಮಾನ್ಯ ಕೇಂದ್ರ ಸರ್ಕಾರದ ಉಲ್ಲೇಖ-3ರ ಪತ್ರದಲ್ಲಿ ಕಂಟೈನ್‌ಮೆಂಟ್ ಜೋನ್‌ಗಳ ಲಾಕ್‌ಡೌನ್ ಅವಧಿಯನ್ನು ದಿನಾಂಕ: 31-08-2020ರವರೆಗೆ ಮುಂದುವರೆಸಲು ಆದೇಶಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಮಾರುಕಟ್ಟೆ ಮಳಿಗೆಗಳನ್ನು ದಿನಾಂಕ; 31-08-2020ರವರೆಗೆ ಸೀಲ್‌ಡೌನ್ ಮುಂದುವರೆಸಲು ಆದೇಶಿಸಿ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಆಯುಕ್ತರು

ಬೃಹತ್ ಬೆಂಗಳೂರು ಮಹನಗರ ಪಾಲಿಕೆ,

ಪ್ರತಿಯನ್ನು:-

1. ಪೋಲೀಸ್ ಆಯುಕ್ತರು, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಜಂಟಿ ಆಯುಕ್ತರು (ದಕ್ಷಿಣ/ಪಶ್ಚಿಮ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
3. ಉಪ ಪೋಲೀಸ್ ಆಯುಕ್ತರು (ದಕ್ಷಿಣ-ಪಶ್ಚಿಮ) ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ
4. ಮುಖ್ಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್/ಸಾರ್ವಜನಿಕ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
5. ಕಂದಾಯ ಅಧಿಕಾರಿ (ಮಾರುಕಟ್ಟೆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
6. ಸಹಾಯಕ ಕಂದಾಯ ಅಧಿಕಾರಿ ಮಾರುಕಟ್ಟೆ (ದಕ್ಷಿಣ/ಪಶ್ಚಿಮ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
7. ಕಛೇರಿ ಪ್ರತಿ.